ಮೈಸೂರು ಡಿಸ್ಟ್ರಿಕ್ಟು.

ತಾರೀಖು 18ನೇ ಏಪ್ರಿಲ್ 1885.

ಮಳವಳ್ಳಿ ತಾಲ್ಲೂಕು ಡೆಪ್ಯುಟಿ ಅಮಲ್ದಾರ ವ 3ನೇ ಕ್ಲಾಸ್ ಮಾಜಿಸ್ಟ್ರೇಟರಾದ ಎ. ನಂಜುಂಡಮೊದಲಿಯಾರ್ರಿಗೆ ಕ್ರಿಮಿನಲ್ ಪ್ರೊಸಿಡ್ಯೂರ್ ಕೋಡಿನ 23ನೇ ಸೆಕ್ಷನ್ (b) ಕ್ಲಾಜ್ ಅನುಸರಿಸಿ ಇದರಡಿ ಕಂಡ ಅಧಿಕಾರಗಳು ಕೊಡಲ್ಪಟ್ಟಿರುತ್ತೆ:—

1. ನಿರೋಧಮದಲಾದ್ದನ್ನು ಅಡ್ಡಿ ಪಡಿಸುವದಕ್ಕೆ ಹುಕ್ಕುಂ ಕೊಡಲು ಅಧಿಕಾರ (ಸೆಕ್ಷನ್ 518.)
2. ಹೇಸಿಕೆ ಬಾರ್ಬಾರ ನಡಿಸಲ್ಪಡುವದನ್ನು ಆಡ್ಡಿ ಮಾಡಲು ಹುಕ್ಕುಂ ಕೊಡುವದಕ್ಕೆ ಅಧಿಕಾರ (ಸೆಕ್ಷನ್ 519.)

ಅಬ್ದುಲ್‌ಖಾದರ್, ಕೆ. ಬಿ.,
ಡಿಸ್ಟ್ರಿಕ್ಟು ಮಾಜಿಸ್ಟ್ರೇಟ್.

ತಾರೀಖು 21ನೇ ಏಪ್ರಿಲ್ 1885.

ಇದರಿಂದ ನೋಟೀಸ್ ಕೊಡುವದೇನಂದರೆ, ಮೈಸೂರು ಡಿಸ್ಟ್ರಿಕ್ಟಿನಲ್ಲಿ ಹಿಡುವಳಿಯಲ್ಲಿಯಿಲ್ಲದ, ಕಂದಾಯ ಮೊಕರ್ರಾಡಲ್ಪಟ್ಟ, ಮತ್ತು ಕಂದಾಯ ಮೊಕರರಾಗದೆ ಇರುವ ತಮಾಂ ಜಮೀನ್‌ಗಳು, ಗ್ರಾಮ ಬೇಲಿಗಳು, ಅಮರಾಯಿ, ಮತ್ತು ಅಮರಾಯಿ ಪೇಟಿಗಳು ಇವುಗಳನ್ನು ಅಡಗಿರುವ ಡಿಸ್ಟ್ರಿಕ್ಟು ಫಾರೆಸ್ಟುಗಳ ಉತ್ಪತ್ತಿ ಬಾಬತು ಪಸಾರಿ ಜಿನಸುಗಳನ್ನು 1886ನೇ ಇಸವಿ ಮಾರ್ಚಿ 31ನೇ ಮುಕ್ಕಾಂವರಿಗೆ ಜಮಾಯಿಸುವ ಹಕ್ಕುದಾರಿಯು, ಮೈಸೂರು ಡಿಸ್ಟ್ರಿಕ್ಟು ಫಾರೆಸ್ಟ್ಸ್ ವ ಗವರ್ನಮೆಂಟು ಫಾರಂಗಳ ಸೂಪರಿಂಟೆಂಡೆಂಟಿನಿಂದ ಅವರ ಆಫೀಸಿನೊಳಗೆ 1885ನೇ ಇಸವಿ ಜೂನ್ 15ನೇ ಮುಕ್ಕಾಂ ಮಧ್ಯಾಹ್ನದಲ್ಲಿ ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡುವದು.

ತಾಲ್ಲೂಕು.	ಜಿನಸಿಗಳ ವಿವರ.
ಮೈಸೂರು	1. ಆಳಲೆಕಾಯಿ, 2 ತಾರೆಕಾಯಿ, 3 ಸೀಗೆಕಾಯಿ, 4 ಅಂಟವಾಳದಕಾಯಿ, 5 ದಿಂಡುಗದ ಗೋಂದು, 6 ಕಾಡರಸಿನ, 7 ಜೇನುಮೇಣ ಮತ್ತು ಜೇನುತುಪ್ಪ, 8 ಅರಗು, 9 ಕಪಿಲಾರಂಗು, 10 ಪಪ್ಲಿಚೆಕ್ಕೆ, 11 ಪತಂಗ, 12 ಮಡ್ಡಿ, 13 ಚಿಳ್ಳದಬೀಜ, 14 ಚಗಚೆಬೀಜ, 15 ಹೊಂಗೆಬೀಜ, 16 ಗೇರುಬೀಜ, 17 ಹಾಲುಮಡ್ಡಿ, 18 ಆವರಿಕೆಮೇಣ, 19 ಜಿಂಕೆಕೊಂಬು, 20 ಗುಗ್ಗಲ, ಇವು ವಗೈರೆ.
ಹೆಗ್ಗಡದೇವನಕೋಟೆ	
ಹುಣಸೂರು	
ಗುಂಡ್ಲುಪೇಟೆ	
ನಂಜನಗೂಡು	
ಚಾಮರಾಜನಗರ	
ಮಳವಳ್ಳಿಸಹಿತ ತಿರಮಕೂಡ್ಲು ನರಸೀಪುರ	
ಮಂಡ್ಯ	
ಶ್ರೀರಂಗಪಟ್ಟಣ	
ಯಡತೊರೆ	

2. ಇಜಾರೆದಾರರಿಗೆ ಹಿಡುವಳಿ ಜಮೀನ್, ಮತ್ತು ಸ್ವಂತ ಅಮರಾಯಿಗಳಲ್ಲಿ ಇರುವ ಗಿಡಗಳ ಫಸಲ್‌ಗಳಿಗೆ ಹಕ್ಕು ಇರುವದಿಲ್ಲವು.
3. ಮೇಲೆ ನಮೂದಿಸಲ್ಪಟ್ಟ ಜಿನಸುಗಳಲ್ಲಿ ಗ್ರಾಮ ಅಮರಾಯಿ ಬಾಬತು ಫಲಫಸಲಗಳು ಅಡಗಿ ಇರುವದಿಲ್ಲವು.

4. ಚಿಡ ದರಖಾಸ್ತುದಾರನು ಕೂಡ್ಲೆ ಹರಾಜು ಮೊಬಲಗು ಪೈಕಿ ಶೇಕಡಾ 25ರ ಮೇರಿಗೆ ಠೇವಣಿ ಇಡತಕ್ಕದ್ದಲ್ಲದೆ, ಬಾಕಿ ಮೊಬಲಗನ್ನು ಡಿಸ್ಟ್ರಿಕ್ಟು ಯಾ ತಾಲ್ಲೂಕು ಖಜಾನೆಯೊಳಗೆ ಮೂರು ಸಮನಾದ ಖಿಸ್ತುಗಳಾಗಿ ಅಂದರೆ 1885ನೇ ಇಸವಿ ಅಕ್ಟೋಬರ್, ನವಂಬರ ಮತ್ತು ಡಿಶಂಬರ ಮಾಹೆಗಳ ಗುರ್ರೇ ತಾರೀಖುಗಳಲ್ಲಿ ಪಾವತಿ ಮಾಡತಕ್ಕದ್ದು.

5. ಇಜಾರೆದಾರನು ಯಾವದಾದರೂ ಖಿಸ್ತನ್ನು, ಅದು ಬಾಕಿ ಆದಾಗ, ಪಾವತಿಮಾಡಲಿಕ್ಕೆ ತಪ್ಪಿದರೆ, 1886ನೇ ಇಸವಿ ಮಾರ್ಚಿ 31ನೇ ಮುಕ್ಕಾಂವರಿಗಿನ ಸಾಲ್ ಪೈಕಿ ಉಳಿದ ಕಾಲದ ಪರಿಯಂತ ಸದರೀ ಪಸಾರೆಜಿನಸುಗಳನ್ನು ಜಮಾಯಿಸುವ ಹಕ್ಕುದಾರಿಯು ಫಾರೆಸ್ಟು ಇಲಾಖೆಯಿಂದ ಮರಳಿ ಹರಾಜು ಹಾಕಲ್ಪಟ್ಟು, ಅಮಾನಿಯಲ್ಲಿ ಕೆಲಸ ನಡಿಸಲ್ಪಡುವದು. ಪರಂತು ಖಿಸ್ತು ಪಾವತಿ ಮಾಡಲಿಕ್ಕೆ ತಪ್ಪಿದ

ಇಜ್ಜಾರೆದಾರನು ಅದರಿಂದ ಸಂಭವಿಸುವ ಲುಕ್ಸಾನಿಗೆ ಗುರಿಯಾಗತಕ್ಕದ್ದು.

6. ಇಜಾರೆಮಾಡಿಕೊಳ್ಳಲು ಅಪೇಕ್ಷಿಸುವ ಜನಗಳಿಗೆ ಯಾವದಾದರೂ ಸಂಗತಿಗಳು ತಿಳಿಯಬೇಕಾಗಿದ್ದರೆ, ಅವರು ಹರಾಜ್ ತಾರೀಖಿಗೆ ಮದಲು ಸೂಪರ್ಇಂಟೆಂಡೆಂಟರ ಆಫೀಸಿನೊಳಗೆ ರೂಬರೂ ಕೇಳಿದಲ್ಲಿ, ಫಾರೆಸ್ಟು ಸೂಪರ್ಇಂಟೆಂಡೆಂಟರು ತಿಳಿಸುವರು.

ತಿ. ಇ. ಯಂ. ರಸಲ್, ಎಂ. ಆರ್. ಸಿ.,
ಫಾರೆಸ್ಟ್ ವ ಗವರ್ನ್ಮೆಂಟ್ ಫಾರಂಗಳ ಸೂಪರ್ಇಂಟೆಂಡೆಂಟ್

ತಾರೀಖು 10ನೇ ಏಪ್ರೆಲ್ 1885.

ಇದರಿಂದ ತಿಳಿಯಪಡಿಸುವದೇನಂದರೆ, ಮೈಸೂರು ಸಬ್ ರಿಜಿಸ್ಟ್ರಾರ್ ಆಫೀಸಿನಲ್ಲಿ ಇದರ ಕೆಳಗೆ ನಮೂದಿಸಿರುವ ದಸ್ತಾವೇಜುಗಳನ್ನ ಕ್ರಮವಾದ ವಾರಸುದಾರ್ರಾಗಲಿ ಅಥವಾ ಅಧಿಕಾರ ಹೊಂದಿದ ಮುತಾಲೀಕನಾಗಲಿ ಈ ತಾರೀಖು ಲಾಗಾಯತು ವಂದು ತಿಂಗಳೊಳಗಾಗಿ ಹಾಜರಾಗಿ ವಾಪಸು ಪಡಿಯಬೇಕು. ತಪ್ಪಿದಲ್ಲಿ 1877ನೇ ಇಸವಿ IIIನೇ ನಂಬರ್ ರಿಜಿಸ್ಟ್ರೇಷನ್ ಆಕ್ಟು 85ನೇ ಸೆಕ್ಷನ್ ಮೇರಿಗೆ ನಾಶಮಾಡಲ್ಪಡುತ್ತೆ.

ನಂಬರ್.	ದಸ್ತಾವೇಜು ಬರದುಕೊಟ್ಟವನ ಹೆಸರು ಮತ್ತು ವಾಸಸ್ಥಳ.	ದಸ್ತಾವೇಜು ಬರಸಿಕೊಂಡವನ ಹೆಸರು ಮತ್ತು ವಾಸಸ್ಥಳ.	ರಿಜಿಸ್ಟ್ರಿಗೆ ಹಾಜರು ಮಾಡಿದ ತಾರೀಖು.	ರಿಜಿಸ್ಟ್ರಿ ತಾರೀಖು.	ದಸ್ತಾವೇಜಿನ ಸ್ವಭಾವ ಮತ್ತು ಕಿಮ್ಮತು.
44 1882—83	ಮೈಸೂರು ಬಸವನಮಹಲ್ಲಾದಲ್ಲಿರುವ ಶ್ರೀರಂಗಪಟ್ಟಣದ ಮುನಸೀಫ್ ಕೋರ್ಟುದಫೆದಾರ ಕ್ರಿಷ್ಣಗಿರಿ ಗೋಸಾಯಿ	ಮೈಸೂರು ಬಸವನಮಹಲ್ಲಾದಲ್ಲಿರುವ ಭಾಲು ಕಚೇರಿ ವಾಲಿಕಾರ ಶಿತಾರಾಂಸಿಂಗ್	19—4—82	19—4—82	23 ರೂಪಾಯಿನ ಖಾಲಿ ಜಮೀನಿನ ಕ್ರಯಪತ್ರ.
489 1882—83	ಮೈಸೂರು ಲಷ್ಕರ್ ಮಹಲ್ಲಾದಲ್ಲಿರುವ ಗುಲಾಂಮಹಮ್ಮದ್ ಸಾಹೆಬರ ಹೆಂಡತಿ ತಾಜಬಿ	ಮೈಸೂರು ಲಷ್ಕರ್ ಮಹಲ್ಲಾದಲ್ಲಿರುವ ಮಹಮ್ಮದ್ಷರೀಫ್ ವುರಫ್ ಬನೆಬಾ	24—10—82	14—11—82	150 ರೂಪಾಯಿನ ಮನೆ ಕ್ರಯ ದಸ್ತಾವೇಜು.
528 1882—83	ಮೈಸೂರು ಮಂಡಿಮಹಲ್ಲಾದಲ್ಲಿರುಸ ಸೈಯದ್ಮಹಮ್ಮದ್ ಹುಸೇನಿ ವುರಫ್ ಸಾಹೆಬಜಾರ್	ಮೈಸೂರು ಮಂಡಿಮಹಲ್ಲಾದಲ್ಲಿರುವ ಸೈಯದ್ ರಹಮತುಲ್ಲಾ ಹುಸೇನಿ	13—11—82	20—11—82	400 ರೂಪಾಯಿನ ಜಮೀನು ಅಧಾರ ದಸ್ತೈವಜು.
613 1882—83	ಮೈಸೂರು ಮಂಡಿಮಹಲ್ಲಾದಲ್ಲಿರುವ ಗಂಗಡಿಕಾರ ಬಸವಂಣ 1, ದೊಳ್ಳೇಗೌಡ 1, ಬಸವಂಣ 1, ಈ ಮೂರು ಜನ	ಮೈಸೂರು ಬಸವನಮಹಲ್ಲಾಗಲ್ಲಿರುವ ಚಂದ್ರಗಿ ಅಪ್ಪಾವುಶೆಟ್ಟಿ	29—11—82	4—12—82	160 ರೂಪಾಯಿನ ಜಮೀನ್ ಕ್ರಯ ಪತ್ರ.
635 1882—83	ಮೈಸೂರು ಮಂಡಿಮಹಲ್ಲಾದಲ್ಲಿರುವ ಲಾಡರ ನರಸಂಣ 1 ಚಿಕ್ಕನರಸಂಣ 1 ಸಹಾ	ಮೈಸೂರು ದೇವರಾಜ ಮಹಲ್ಲಾದಲ್ಲಿರುವ ಸಾಹುಕಾರ ಚಿಕ್ಕ ಮುದ್ದಂಣನ ಮಗ ಚಿಕ್ಕ ಪಾಪಂಣ	5—12—82	8—12—82	500 ರೂಪಾಯಿನ ಜಮೀನ್ ಅಧಾರ ಪತ್ರ.

ನಂ. 2.

ತಾರೀಖು 24ನೇ ಏಪ್ರೆಲ್ 1885.

ಹೆಗ್ಗಡದೇವನಕೋಟೆ ಸಬ್ ರಿಜಿಸ್ಟ್ರಾರ್ ಆಫೀಸಿನಲ್ಲಿ ಅದರ ಕೆಳಗೆ ನಮೂದಿಸುವ ದಸ್ತೈವಜನ್ನ ಕ್ರಮವಾದ ವಾರಸದಾರನಾಗಲಿ ಅಥವಾ ಅಧಿಕಾರ ಹೊಂದಿದ ಮುತಾಲೀಕನಾಗಲಿ ಈ ತಾರೀಖು ಲಾಗಾಯಿತು ಒಂದು ತಿಂಗಳೊಳಗಾಗಿ ಹಾಜರಾಗಿ ವಾಪಸ್ ಪಡಿಯಬೇಕು. ತಪ್ಪಿದಲ್ಲಿ 1877ನೇ ಇಸವಿ 3ನೇ ನಂಬರು ರಿಜಿಸ್ಟ್ರೇಷನ್ ಆಕ್ಟು 85ನೇ ಸೆಕ್ಷನ್ ಮೇರಿಗೆ ನಾಶಮಾಡಲ್ಪಡುತ್ತೆ.